ಸುದ್ದಿ ಸಂಚಯ

# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು







ಇತ್ತೀಚೆಗೆ ದೇಶದಾದ್ಯಂತ ಹರಡಿರುವ ಕೋವಿಡ್-೧೯ನಿಂದಾಗಿ ಬೇಲೂರು ಮಠ ಹಾಗೂ ಇತರ ಶಾಖಾಕೇಂದ್ರಗಳನ್ನು ಸುಮಾರು ೩ ತಿಂಗಳ ಕಾಲ ಮುಚ್ಚಲಾಗಿತ್ತು; ಜೂನ್ ೧೫ರಿಂದ ಈ ಕೇಂದ್ರಗಳನ್ನು ಭಕ್ತರಿಗಾಗಿ ತೆರೆಯಲಾಗಿದೆ. ಮುಂಜಾಗರೂಕತೆಯ ಕ್ರಮವಾಗಿ ಕೆಲವೊಂದು ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಚಿಸಿದ ವಿಧಿವಿಧಾನಗಳಿಗೆ ಅನುಸಾರವಾಗಿ ಇವುಗಳನ್ನು ಮಾಡಲಾಗಿದೆ.

## ಶಾಖಾ ಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು

### ಭಾರತದಲ್ಲಿ

ಮೇಘಾಲಯ ರಾಜ್ಯದ ರಾಜ್ಯಪಾಲರಾದ ಶ್ರೀ ತಥಾಗತ ರಾಯ್ ಅವರು ಶಿಲ್ಲಾಂಗ್ ಕೇಂದ್ರಕ್ಕೆ ಭೇಟಿ ನೀಡಿದರು. ೨೦೨೦ನೇ ಸಾಲಿನ NIRF ರ್‍ಯಾಂಕಿಂಗ್‌ನಲ್ಲಿ ಮಿಷನ್ನಿನ ನಾಲ್ಕು ಕೇಂದ್ರಗಳಿಗೆ ಅತ್ಯುತ್ತಮ ಶ್ರೇಣಿ ದೊರಕಿವೆ: ೧) **ಶಾರದಾಪೀಠ** ವಿದ್ಯಾ ಮಂದಿರ (೭ನೇ ರ್‍ಯಾಂಕ್), **ರಹರಾ** ವಿವೇಕಾನಂದ ಸೆಂಟಿನರಿ ಕಾಲೇಜು (೧೧ ) **ನರೇಂದ್ರಪುರ** ರೆಸಿಡೆನ್ಸಿಯಲ್ ಕಾಲೇಜು (೨೦) ಹಾಗೂ **ಕೊಯಮತ್ತೂರು ಮಿಷನ್**‌ನ ಆರ್ಟ್ ಅಂಡ್ ಸೈನ್ಸ್ ಕಾಲೇಜು (೬೫).

**ಮೌಲ್ಯ ಶಿಕ್ಷಣ ಕಾರ್ಯಕ್ರಮ:** ದೆಹಲಿ ಕೇಂದ್ರವು ಏಪ್ರಿಲ್ ೧ ರಿಂದ ಜೂನ್ ೨೯ರ ವರೆಗೆ, ೬೩ ಆನ್‌ಲೈನ್ ಕಾರ್ಯಗಾರಗಳನ್ನು ನಡೆಸಿತು. ದೇಶದ ಧ ಭಾಗಗಳ ಹಲವು ಸರ್ಕಾರಿ ಹಾಗೂ ಖಾಸಗಿ ಶಾಲೆಯ ಒಟ್ಟು ೨೮೩ ಅಧ್ಯಾಪಕರು ಇದರಲ್ಲಿ ಭಾಗವಸಿದರು.

### ವಿದೇಶಗಳಲ್ಲಿ

ಫಿಜಿಯಲ್ಲಿನ ಭಾರತದ ದೂತವಾಸದ ಶ್ರೀಮತಿ ಪದ್ಮಜಾ ಅವರು ಜೂನ್ ೨೨ರಂದು **ಫಿಜಿ** ಕೇಂದ್ರಕ್ಕೆ ಭೇಟಿ ನೀಡಿದರು. **ಢಾಕಾ** ಕೇಂದ್ರದ ಶಾಲೆಯಲ್ಲಿ ಕಲಿಯುತ್ತಿರುವ ೨೩ ಮಂದಿ ದ್ಯಾರ್ಥಿಗಳು ಸೆಕೆಂಡರಿ(೧೦ನೇ ತರಗತಿ) ಪರೀಕ್ಷೆಗಳಲ್ಲಿ A+ ಶ್ರೇಣಿಯಲ್ಲಿ ಉತ್ತೀರ್ಣರಾದರು.

**ಪರಿಹಾರ ಕಾರ್ಯಗಳು:** ದೇಶದೆಲ್ಲೆಡೆ ವ್ಯಾಪಕಗೊಂಡಿರುವ **ಕೋವಿಡ್-೧೯** ಸೋಂಕಿನ ಪ್ರಯುಕ್ತ ಲಾಕ್‌ಡೌನ್ ಆಗಿರುವ ಸಂದರ್ಭದಲ್ಲಿ ರಾಮಕೃಷ್ಣ ಮಹಾಸಂಘದ ಬಹುತೇಕ ಎಲ್ಲ ಶಾಖಾಕೇಂದ್ರಗಳು ವಿಭಿನ್ನ ರೀತಿಯ ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದು, ಬೇಯಿಸಿದ ಆಹಾರ ವಿತರಣೆ, ದಿನಸಿ ಪದಾರ್ಥಗಳ ವಿತರಣೆ, ಆರೋಗ್ಯ ಕಿಟ್‌ಗಳ ವಿತರಣೆ, ನಿರಾಶ್ರಿತರಿಗೆ ಆಶ್ರಯ ಹಾಗೂ ಆಹಾರ ವಿತರಣೆ ಇತ್ಯಾದಿ ಕಾರ್ಯಗಳಲ್ಲಿ ತೊಡಗಿದ್ದವು. ಈಚೆಗೆ ಲಾಕ್‌ಡೌನ್ ಸಡಲಿಕೆಯಾದ ಬಳಿಕ ಈ ಪರಿಹಾರ ಕಾರ್ಯಗಳು ಕೆಲವು ಕೇಂದ್ರಗಳಲ್ಲಿ ಮಾತ್ರ ಮುಂದುವರಿದಿವೆ. ಪಶ್ಚಿಮ ಬಂಗಾಳ, ಒರಿಸ್ಸಾ ಹಾಗೂ ಬಾಂಗ್ಲಾದೇಶದ ಹಲವೆಡೆ ಅಪ್ಪಳಿಸಿದ **ಅಂಫಾನ್** ಚಂಡಮಾರುತದಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳು ನಡೆಯುತ್ತಿವೆ. ಇದರೊಂದಿಗೆ **ನಿಸರ್ಗ** ಚಂಡಮಾರುತ ಪರಿಹಾರ ಕಾರ್ಯ, ಹಾಗೂ ಇತರ ಪರಿಹಾರ ಕಾರ್ಯಗಳು ಕೆಲವೆಡೆ ನಡೆಯುತ್ತಿವೆ.




Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020